ಪರಿಸರ ಮಾಲಿನ್ಯ ತಡೆಯುವುದು

163 (1190) ಶ್ರೀ ಹೆಚ್ ಎಸ್ ಶಂಕರ ಲಿಂಗೇಗೌಡ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯಕ್ಕೆ ಸಂಬಂಧ ಪಟ್ಟಂತೇ ಬಂದಿರುವ ದೂರುಗಳು ಎಷ್ಟು?

ಆ) ಈ ದೂರುಗಳ ಬಗ್ಗೆ ಇಲಾಖೆ ಯಾವ ಯಾವ ಕ್ರಮ ಕೈಗೊಂಡಿದೆ?

ಇ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯ ತಡೆ/ನಿಯಂತ್ರಣಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಪಿ ಚೆನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಮೈಸೂರು ಜಿಲ್ಲೆಯಾದ್ಯಂತ ದಿನಾಂಕ 1-4-06 ರಿಂದ 31-3-07 ರ ವರೆಗೆ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೇರ ವ್ಯಾಪ್ತಿಯಲ್ಲಿ 32 ದೂರುಗಳು ಸ್ವೀಕೃತವಾಗಿರುತ್ತದೆ

ಆ) ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ವಿರುದ್ಧ ಕ್ರಮ ಕೈಗೊಳ್ಳಲು ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1981 ಅಡಿಯಲ್ಲಿ ಕ್ರಮ ಜರುಗಿಸಲು ಶಾಸನ ಬದ್ಧ ಸಂಸ್ಥೆಯಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧಿಕಾರ ಪ್ರದತ್ತವಾಗಿರುತ್ತದೆ ದೂರುಗಳಿಗೆ ಸಂಬಂಧಿಸಿದಂತೆ ಸದರಿ ಕಾಯ್ದೆಗಳಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಮ ಕೈಗೊಂಡಿದ್ದು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ

ಇ) ಮೈಸೂರು ಜಿಲ್ಲೆಯಾದ್ಯಂತ ಹಾಗೂ ಕರ್ನಾಟಕದಾದ್ಯಂತ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1981, ಹಾಗೂ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಉಮಾವಳಿಗಳು, 2000 ಇವುಗಳನ್ನು ಜಾರಿಗೊಳಿಸುತ್ತಿದೆ

- ಜಲ ಕಾಯ್ದೆ ಹಾಗೂ ವಾಯು ಕಾಯ್ದೆಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಗಳು ತಮ್ಮಲ್ಲಿ ಉತ್ಪತ್ತಿಯಾಗುವ ಗೃಹ ಬಳಕೆಯ ಹಾಗೂ ಕೈಗಾರಿಕಾ ಕಾರ್ಯ ಚಟುಚಟಿಕೆಗಳ ತ್ಯಾಜ್ಯ ನೀರನ್ನು ಹಾಗೂ ಕಲುಷಿತವಾದ ಹೊಗೆಯನ್ನು ವಾತಾವರಣಕ್ಕೆ ಬಿಡುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

- ಹಾಗೆಯೇ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳು, 2000 ಇದರ ಅಡಿಯಲ್ಲಿ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧೀಕೃತ ಪತ್ರ ಪಡೆಯಬೇಕಾಗಿರುತ್ತದೆ
- ಜಲ ಕಾಯ್ದೆಯಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರವನ್ನು ನೀಡುವಾಗ ಉದ್ದಿಮೆಗಳು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ಅಳವಡಿಸಿ, ಶುದ್ಧೀಕರಿಸಿದ ನೀರನ್ನು ಅವುಗಳಿಗೆ ನಿಗದಿಪಡಿಸಿರುವ ಮಾನಕಗಳನ್ನು ಮೀರದಂತೆ ಹೊರ ಚೆಲ್ಲುವಂತೆ ನಿಬಂಧನೆಗಳನ್ನು ನಿಗದಿಪಡಿಸಲಾಗುತ್ತದೆ ಹಾಗೂ ಸಂಸ್ಕರಿಸಿದ ನೀರನ್ನು ತೋಟಗಾರಿಕೆಗಾಗಿ ಅಥವಾ ಕೈಗಾರಿಕಾ ಚಟುವಟಿಕೆಗಳಿಗೆ ಪುನರ್ಬಳಕೆ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉದ್ದಿಮೆಗಳಿಗೆ ನಿರ್ದೇಶಿಸಲಾಗುತ್ತದೆ
- ವಾಯು ಕಾಯ್ದೆಯಡಿಯಲ್ಲಿ ಕೂಡ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರ ಪಡೆಯುವಾಗ ವಾಯು ಮಾಲಿನ್ಯದ ಮೂಲಗಳಿಂದ ಬರುವ ಕಲುಷಿತ ಹೊಗೆಯನ್ನು ತಡೆಗಟ್ಟಲು ಸೂಕ್ತ ಎತ್ತರವಿರುವ ಚಿಮಣಿಗಳನ್ನು ಹಾಗೂ ವಾಯು ಮಾಲಿನ್ಯ ಉಪಕರಣಗಳನ್ನು ಅಳವಡಿಸಬೇಕಾಗಿರುತ್ತದೆ ಈ ರೀತಿ ಅಗತ್ಯ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸಿದ ನಂತರವೆ ಮಂಡಳಿಯಿಂದ ಉದ್ದಿಮೆಗಳಿಗೆ ಸಮ್ಮತಿ ಪತ್ರಗಳನ್ನು ನೀಡಲಾಗುತ್ತದೆ
- ಮುಂದುವರಿದಂತೆ, ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳಡಿಯಲ್ಲಿ ಉದ್ದಿಮೆಗಳಿಗೆ ಅಧೀಕೃತ ಪತ್ರ ನೀಡುವಾಗಲೂ ಸಹ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿಯಮಗಳಿಗನುಸಾರವಾಗಿ ಸಂಗ್ರಹಿಸಿಡುವ ಷರತ್ತುಗಳಿಗನುಗುಣವಾಗಿ ನೀಡಲಾಗುತ್ತದೆ
- ಒಂದು ವೇಳೆ ಮಂಡಳಿಯು ನಿಗದಿ ಪಡಿಸಿದ ನಿಬಂಧನೆಗಳನ್ನು ಉದ್ದಿಮೆಯು ಉಲ್ಲಂಘಿಸಿದಲ್ಲಿ ಮೇಲಿನ ನಿಯಮಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಯ ಮೇಲೆ ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಾದ್ಯಂತ ಪರಿಸರ ಕಾಯ್ದೆಗಳನ್ನು ಉಲ್ಲಂಘಿಸಿದ ಉದ್ದಿಮೆಗಳ ವಿರುದ್ಧ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗಿರುತ್ತದೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿರುವ ಉದ್ದಿಮೆಗಳ ಸಂಖ್ಯೆ 6 ಮುಚ್ಚುವ ಆದೇಶಗಳನ್ನು ಜಾರಿಗೊಳಿಸಲಾಗಿರುವ ಉದ್ದಿಮೆಗಳ ಸಂಖ್ಯೆ 9 ಇವುಗಳ ವಿವರಗಳನ್ನು ಅನುಬಂಧ –2 ರಲ್ಲಿ ಲಗತ್ತಿಸಲಾಗಿದೆ

ಅನುಬಂಧ–1

ಕ್ರಮ ಸಂಖ್ಯೆ	ಮಾಲಿನ್ಯ ಸಂಬಂಧಿತ ದೂರಿನ ವಿಧ ಮತ್ತು ವಿವರ			ದೂರು ಸ್ವೀಕೃತಿಯಾದ ದಿನಾಂಕ	ದೂರಿನ ವಿರುದ್ಧ ಜರುಗಿಸಿದ ಕ್ರಮ
	ವಾಯು ಮಾಲಿನ್ಯ	ಜಲ ಮಾಲಿನ್ಯ	ಶಬ್ದ ಮಾಲಿನ್ಯ		
1	–	–	ಶಾಂತಿ ನಗರದಲ್ಲಿರುವ ಸಾಮಿಲ್ ಉದ್ದಿಮೆಯಿಂದ ಶಬ್ದ ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ	06–04–06	ಉದ್ದಿಮೆಗೆ ನೋಟೀಸ್ ಜಾರಿಮಾಡಿ ಶಬ್ದ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿತ್ತು ಅದರ ಪ್ರಕಾರ ಜನರೇಟರ್‌ಗೆ ಸೈಲೆನ್ಸರ್ ಅಳವಡಿಸಿಕೊಳ್ಳಲಾಗಿದೆ
2	ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ವಾಯು ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ	–	–	03–05–06	ಈ ಬಗ್ಗೆ ಉದ್ದಿಮೆಗಳನ್ನು ಪರಿವೀಕ್ಷಿಸಿ ನೋಟೀಸ್ ಜಾರಿಮಾಡಲಾಗಿದೆ ಉದ್ದಿಮೆಯವರು ವಾಯು ಮಾಲಿನ್ಯ ನಿಯಂತ್ರಣ ಉಪಕರಣ

					ಅಳವಡಿಸಿಕೊಂಡಿದ್ದಾರೆ
3		ಮೇ ಸಿದ್ಧೀ ಪ್ಯಾಕಿಂಗ್‌ರವರು ಘನ ತ್ಯಾಜ್ಯ ವಸ್ತುಗಳನ್ನು ಚರಂಡಿಗೆ ಹಾಕುತ್ತಿರುವಕುರಿತು	–	03–05–06	ಸ್ಥಳ ಪರಿವೀಕ್ಷಣೆ ಮಾಡಿ ಸದರಿ ತೊಂದರೆಯನ್ನು ನಿವಾರಿಸಲಾಯಿತು
4	ಹೋಟೆಲ್‌ನಿಂದ ಹಾಕುತ್ತಿರುವ ಮಾಲಿನ್ಯ		–	24–05–06	ಪರಿವೀಕ್ಷಣೆ ನಡೆಸಿ ನೋಟಿಸು ನೀಡಿ ಕ್ರಮ ಕೈಗೊಳ್ಳಲಾಗಿದೆ ಉದ್ದಿಮೆಯು ಅಗತ್ಯ ಕ್ರಮ ಕೈಗೊಂಡಿದೆ
5	–	ಕೊಳಚೆ ನೀರು ಶುದ್ಧಿಕರಣ ಘಟಕವನ್ನು ನಿರ್ಮಾಣ ಮಾಡುವುದರಿಂದ ಹಾಗುವ ತೊಂದರೆ	–	29–05–06	ಈ ಬಗ್ಗೆ ನಂಜನಗೂಡು ಪಟ್ಟಣ ಪಂಚಾಯಿತಿಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಹಾಗೂ ಸದರಿ ಸ್ಥಳದಲ್ಲಿ ನಿರ್ಮಾಣ ಕಾರ್ಯ

		ಕುರಿತು ಹಾಗೂ ಅದನ್ನು ಬೇರೆಡೆಗೆ ವರ್ಗಯಿಸುವ ಬಗ್ಗೆ			ಪ್ರಾರಂಭವಾಗಿರುವುದಿಲ್ಲ
6	ಹಸಿರು ವಲಯಕ್ಕೆ ಸಂಬಂಧಿಸಿದಂತೆ ದೂರು	–	–	06–06–06	ಈ ಕಛೇರಿಯಿಂದ ಕೆಐಎಡಿಬಿ ಅಧಿಕಾರಿಗಳಿಗೆ ಪತ್ರ ಬರೆದು ಭೂ ಉಪಯೋಗದ ಯೋಜನೆಗಾಗಿ ಮಂಡಳಿಯಿಂದ ಸಮ್ಮತಿಯನ್ನು ಪಡೆದುಕೊಳ್ಳುವಂತೆ ಸೂಚಿಸಲಾಗಿದೆ
7	ಶ್ರೀ ನಂಜುಂಡೇಶ್ವರ ಹಲ್ಲರ್ ಮತ್ತು ಫ್ಲೋರ್‌ಮಿಲ್‌ನ್ನು ನಡೆಸುತ್ತಿರುವ ಬಗ್ಗೆ	–	–	08–06–06	ಈ ಉದ್ದಿಮೆಯ ವಿರುದ್ಧ ದೂರುದಾರರು ಫಿರ್ಯಾದು ಮಾನ್ಯ ನ್ಯಾಯಾಲಯದಲ್ಲಿ ಇದೆ ಫ್ಲೋರ್ ಮಿಲ್‌ನವರಿಗೆ ನೋಟೀಸ್ ಜಾರಿ ಮಾಡಿದ್ದು ಟಿ ನರಸೀಪುರ ಪಟ್ಟಣ ಪಂಚಾಯತಿಯವರಿಗೆ ಸಹಾ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ

8	–	ಅನಧೀಕೃತವಾಗಿ ಬಡಾವಣೆಯನ್ನು ನಿರ್ಮಿಸಿರುವ ಬಗ್ಗೆ	–	30–06–06	ಪರಿವೀಕ್ಷಣೆ ನಡೆಸಿ ನೋಟಿಸು ನೀಡಿ ಕ್ರಮ ಕೈಗೊಳ್ಳಲಾಗಿದೆ ಬಡವಾಣೆ ನಿರ್ಮಾಣದಾರರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
9	–	ಕಾರ್ಖಾನೆಯ ತ್ಯಾಜ್ಯವನ್ನು ಅಕ್ರಮವಾಗಿ ಕಬಿನಿ ಬಲದಂಡೆ ನಾಲೆಗ ಬಿಟ್ಟಿರುವ ಬಗ್ಗೆ	–	10–07–06	ದಿನಾಂಕ 26–06–2006 ರಿಂದ ನಿರಂತರವಾಗಿ ಪರಿವೀಕ್ಷಣೆ ನಡೆಸಿ ನೋಟೀಸ್ ಜಾರಿಮಾಡಲಾಗಿದೆ ಹಾಗೂ ಕಬಿನಿ ನಾಲಯದಲ್ಲಿ ಕಲುಷಿತ ನೀರನ್ನು ಉದ್ದಿಮೆಯಿಂದ ಪಂಪ್ ಮಾಡಿಸಿ ಉದ್ದಿಮೆಯ ಅವರಣದೊಳಗೆ ಸಂಗ್ರಹಿಸುವಲ್ಲಿ ಯಶಸ್ವಿ ಕ್ರಮ ಕೈಗೊಳ್ಳಲಾಗಿದೆ
10		ಕಾರ್ಖಾನೆಯ ತ್ಯಾಜ್ಯವನ್ನು			ದಿನಾಂಕ 26–06–2006ರಿಂದ ನಿರಂತರವಾಗಿ ಪರಿವೀಕ್ಷಣೆ ನಡೆಸಿ

	–	ಅಕ್ರಮವಾಗಿ ಕಬಿನಿ ಬಲದಂಡೆ ನಾಲೆಗೆ ಬಿಟ್ಟಿರುವ ಬಗ್ಗೆ	–	24–07–06	ನೋಟೀಸ್ ಜಾರಿಮಾಡಲಾಗಿದೆ ಹಾಗೂ ಕಬಿನಿ ನಾಲಯದಲ್ಲಿ ಕಲುಷಿತ ನೀರನ್ನು ಉದ್ದಿಮೆಯವರಿಂದ ಪಂಪ್ ಮಾಡಿಸಿ ಉದ್ದಿಮೆಯ ಅವರಣದೊಳಗೆ ಸಂಗ್ರಹಿಸುವಲ್ಲಿ ಯಶಸ್ವಿ ಕ್ರಮ ಕೈಗೊಳ್ಳಲಾಗಿದೆ
11	–	ಅನಧೀಕೃತವಾಗಿ ಬಡಾವಣೆಯನ್ನು ನಿರ್ಮಿಸಿರುವ ಬಗ್ಗೆ	–	24–07–06	ಪರಿವೀಕ್ಷಣೆ ನಡೆಸಿ ನೋಟೀಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ ಬಡವಾಣೆ ನಿರ್ಮಾಣದಾರರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕ್ಕದ್ದಮೆ ಹೂಡಲಾಗಿದೆ
12	–	ಕುವೆಂಪುನಗರದಲ್ಲಿ ಶ್ರೀ ವಿವೇಕ್‌ರವರ ಸರ್ವಿಸ್ ಸ್ಟೇಷನ್ ನಿಂದ ಹಾಗುತ್ತಿರುವ	–	24–07–06	ಪರಿವೀಕ್ಷಣೆ ನಡೆಸಿ ನೋಟೀಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ ಮತ್ತು ಉದ್ದಿಮೆಯು ಸ್ಥಗಿತಗೊಂಡಿದೆ

		ತೊಂದರೆ			
13	–	ಉದ್ದಿಮೆಯಿಂದ ಉಂಟಾಗುತ್ತಿರುವ ಘನ ತ್ಯಾಜ್ಯ ವಸ್ತುಗಳನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿರುವ ಬಗ್ಗೆ	–	26–07–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 17–08–2006 ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಗೆ ನೋಟಿಸ್ ಜಾರಿಗೊಳಿಸಿ ಘನ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ನಿರ್ದೇಶನ ನೀಡಲಾಗಿದೆ ಈ ನಿರ್ದೇಶನದಂತೆ, ಉದ್ದಿಮೆಯವರು ಕ್ರಮ ಕೈಗೊಂಡಿದ್ದು, ಘನ ತ್ಯಾಜ್ಯ ವಸ್ತುಗಳನ್ನು ಸದರಿ ಸ್ಥಳದಿಂದ ತೆಗೆದು ಹಾಕಿರುತ್ತಾರೆ ಹಾಗೂ ಈ ಸಮಸ್ಯೆಯನ್ನು ಪರಿಹರಿಸಲಾಗಿದೆ
14	ಮೆ ಜಿ ಕೆ ಇಂಡಸ್ಟ್ರೀಸ್‌ನ ಹೊಗೆ				ಸದರಿ ದೂರಿನನ್ವಯ ಉದ್ದಿಮೆಯವರಿಗೆ ದಿನಾಂಕ 07–

	ಕೊಳವೆಯಿಂದ ಕಪ್ಪುಹೊಗೆ ಹೊರ ಬರುತ್ತಿರುವ ಬಗ್ಗೆ	–	–	31–07–06	08–2006ರಂದು ನೋಟೀಸ್ ಜಾರಿ ಮಾಡಿದ ನಂತರ ಉದ್ದಿಮೆಯವರು ಮಾಲಿನ್ಯವನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತಾರೆ ಹಾಗೂ ಈ ದೂರನ್ನು ಪರಿಹರಿಸಲಾಗಿದೆ
15	ದಿ ಮೈಸೂರ್ ಚಿಪ್ ಬೋರ್ಡ್ಸ್, ಮೈಸೂರು–ಹುಣಸೂರು ರಸ್ತೆ, ಇಣಕಲ್, ಮೈಸೂರು ಉದ್ದಿಮೆಯಿಂದ ಹೊರಬರುವ ದೂಳು ಮತ್ತು ಹೊಗೆಯಿಂದ ತೊಂದರೆ ಉಂಟಾಗುತ್ತಿರುವ ಬಗ್ಗೆ	–	–	01–08–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 11–08–2006ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಗೆ ನೋಟೀಸ್ ಜಾರಿಗೊಳಿಸಿ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ತಿಳಿಸಿ ದೂರನ್ನು ಪರಿಹರಿಸಲಾಗಿದೆ
16		ಜೆಮಿನಿ ಡಿಸ್ಟಿಲರೀಸ್ ನಿಂದ ಉಂಟಾಗಿರುವ		08–08–06	ದೂರನ್ನು ಪರಿಗಣಿಸಿ ಉದ್ದಿಮೆಯವರಿಗೆ ಪತ್ರ ಬರೆದು

	–	ತೊಂದರೆಯ ಬಗ್ಗೆ	–		ಪರಿಹಾರದ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಬೆಳೆ ನಷ್ಟ ಪರಿಹಾರ ಭರಿಸುವಂತೆ ಅ ಪ ಜಿ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಉದ್ದಿಮೆಯವರಿಗೆ ಸೂಚಿಸಿರುತ್ತಾರೆ
17	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	04–09–06	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ನಿರ್ಮಾಣ ಮಾಡುವ ಸಂಬಂಧ ಮಂಡಳಿಯ ವತಿಯಿಂದ ಸಾರ್ವಜನಿಕ ವಿಚಾರಣ ಸಭೆಯನ್ನು ನಡೆಸಿದ್ದು ಸದರಿ ಸಭೆಯಲ್ಲಿ ಚರ್ಚಿಸದಂತೆ ನಡುವಳಿಗಳನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ ಎಂಬ ವಿಷಯವನ್ನು ತಿಳಿಸಿ

					ದೂರುದಾರರಿಗೆ ಪತ್ರ ಬರೆದು ಕಡತವನ್ನು ಮುಚ್ಚಲಾಗಿದೆ
18	ಕೈಗಾರಿಕಾ ಪ್ರದೇಶವಲ್ಲದ ಸ್ಥಳದಲ್ಲಿ ಕಾರ್ಖಾನೆ ಮಾರ್ಪಟು ಮಾಡಿಕೊಂಡು ಸಾರ್ವಜನಿಕರು ಹಾಗೂ ಅಕ್ಕಪಕ್ಕದವರಿಗೆ ತೊಂದರೆಯಾಗುವ ರೀತಿಯಲ್ಲಿ ವಹಿವಾಟು ನಡೆಸುತ್ತಿರುವ ಬಗ್ಗೆ	–	–	06–09–06	ಸದರಿ ದೂರಿನನ್ವಯ ಸ್ಥಳ ಪರಿವೀಕ್ಷಣೆ ಮಾಡಿ ಅಲ್ಲಿ ಯಾವುದೇ ರಾಸಯನಿಕ ಉತ್ಪಾದನೆಗಳನ್ನು ತಯಾರಿಕೆ ಮಾಡುತ್ತಿರುವುದು ಕಂಡು ಬಂದ್ದಿಲ್ಲದರಿರುವುದನ್ನು ಜಿಲ್ಲಾ ಕೈಗಾರಿಕ ಕೇಂದ್ರಕ್ಕೆ ಪತ್ರ ಬರೆದು ಕಡತವನ್ನು ಮುಚ್ಚಲಾಗಿದೆ
19	–	ನಂಜನಗೂಡು ತಾಲ್ಲೂಕು ಕಲ್ಲಹಳ್ಳಿ ಗ್ರಾಮದ ಗದೆಯಲ್ಲಿನ ಜಮೀನುಗಳ ಗುಣಮಟ್ಟ ಸ್ಥಳೀಯ	–	23–09–06	ಈ ದೂರಿನ ಬಗ್ಗೆ ದಿನಾಂಕ 23–09–2006 ರಂದು ಪರಿವೀಕ್ಷಣೆ ನಡೆಸಿ ಗದ್ದೆಯ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲಾಗಿತ್ತು ಕೃಷಿ ಅಧಿಕಾರಿಗಳಿಗೆ ಮಣ್ಣಿನ

		ಕಾರ್ಖಾನೆಗಳಿಂದ ತುಂಬಾ ಹದಗೆಟ್ಟಿದ್ದು ಯಾವ ಬೆಳೆಯು ಆಗದೇ ಇರುವ ದೂರು			ಗುಣ ಹದಗೆಟ್ಟಿರುವ ಬಗ್ಗೆ ವರದಿ ಇಲಾಖೆಯವರು ಕ್ರಮ ಕೈಗೊಳ್ಳಲಿದ್ದಾರೆ
20	ಉದ್ದಿಮೆಯಿಂದ ಉಂಟಾಗುತ್ತಿರುವ ಘನ ತ್ಯಾಜ್ಯ ' ವಸ್ತುಗಳನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿರುವ ಬಗ್ಗೆ	–	–	30–09–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 27–10–2006 ರಂದು ಪರಿವೀಕ್ಷಣೆ ನಡೆಸಿ, ಪರಿವೀಕ್ಷಣೆಯ ಸಮಯದಲ್ಲಿ ಘನ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ನಿರ್ದೇಶನ ನೀಡಲಾಗಿದೆ ಅದರನ್ವಯ ಉದ್ದಿಮೆಯವರು ಸೂಕ್ತ ಕ್ರಮ ಕೈಗೊಂಡಿರುತ್ತಾರೆ ಹಾಗೂ ಈ ದೂರನ್ನು ಪರಿಹರಿಸಲಾಗಿದೆ

F9

21	–	–	ವಿಶ್ವ ಮಾನವ ಜೋಡಿ ರಸ್ತೆಯ ಎರಡನೇ ಅಡ್ಡ ರಸ್ತೆಯಲ್ಲಿ ಸರ್ವಿಸ್ ಸ್ಟೇಷನ್ ಇಂದ ಶಬ್ದ ಮಾಲಿನ್ಯ ಮತ್ತು ಗೋಡಿಯ ಅಡೆತಡೆಯ ಬಗ್ಗೆ	09–10–06	ಸದರಿ ದೂರಿನನ್ವಯ ಸರ್ವಿಸ್ ಸ್ಟೇಷನ್ ಪರಿವೀಕ್ಷಣೆ ಮಾಡಿ ಅಲ್ಲಿರುವ ಜನರೇಟರ್‌ನಿಂದ ಉಂಟಾಗುತ್ತಿರುವ ಶಬ್ದ ಮಾಲಿನ್ಯವನ್ನು ಉಲ್ಲೀಖಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಸರ್ವಿಸ್ ಸ್ಟೇಷನ್ ಜೊತೆ ಪತ್ರ ಬರೆಯಲಾಗಿದೆ ಹಾಗೂ ಪತ್ರದ ಪ್ರತಿಯನ್ನು ದೂರುದಾರರಿಗೆ ಕಳುಹಿಸಲಾಗಿದೆ ತದನಂತರ ಶಬ್ದ ಮಾಲಿನ್ಯ ಬಗ್ಗೆ ಸರ್ವಿಸ್ ಸ್ಟೇಷನ್ ವಿರುದ್ಧ ದೂರು ಸೀಕೃತಿಯಾಗಿರುವುದಿಲ್ಲ ಅದುದರಿಂದ ಕಡತವನ್ನು ಮುಕ್ತಾಯಗೊಳಿಸಲಾಗಿದೆ
22	ಮೆ ವಿನಯ			21–11–06	ಸದರಿ ದೂರಿನನ್ವಯ

	ಪ್ರೊಡಕ್ಟ್ಸ್, ಎ–110, ಕೈಗಾರಿಕ ಪಸಾಹತು, ಹೆಬ್ಬಾಳು ಕೈಗಾರಿಕ ಪ್ರದೇಶ, ಮೈಸೂರು ಉದ್ದಿಮೆ ಯಿಂದ ಹೊರಬರುವ ಕಲುಷಿತ ಹೊಗೆಯಿಂದ ತೊಂದರೆ ಉಂಟಾಗುತ್ತಿರುವ ಬಗ್ಗೆ	–	–		ಉದ್ದಿಮೆಯನ್ನು 30–11–2006 ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಯ ವಾಯು ಮಾಲಿನ್ಯದ ಮೂಲವಾದ ಬಾಯ್ಲರ್‌ಗೆ ಉದ್ದಿಮೆಯವರು ಐ ಡಿ ಫ್ಯಾನ್ ಅಳವಡಿಸಿವಂತೆ ನೋಟೀಸ್ ಜಾರಿ ಮಾಡಿದ ನಂತರ ಉದ್ದಿಮೆಯವರು ಮಂಡಳಿಗೆ ಮುಚ್ಚಳಿಕೆಯನ್ನು ಸಲ್ಲಿಸಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ ಅದೇ ರೀತಿ ಮಾಲಿನ್ಯವನ್ನು ತಡೆಗಟ್ಟಿದ್ದು ದೂರನ್ನು ಪರಿಹರಿಸಲಾಗಿದೆ
23	ಮೆ॥ ಜುಬಿಲೆಂಟ್ ಆರ್ಗ್ಯಾನೋಸಿಸ್			08–12–06	ಸದರಿ ಉದ್ದಿಮೆಯು ಔಷಧಿ ತಯಾರಿಕಾ ಕಾರ್ಖಾನೆಯಾ

	ಲಿಮಿಟೆಡ್, ಕೆ ಐ ಎ ಡಿ ಬಿ ಕೈಗಾರಿಕಾ ಪ್ರದೇಶ, ನಂಜನಗೂಡು ಉದ್ದಿಮೆಯಿಂದ ಉಂಟಾಗುತ್ತಿರುವ ದೂರ್ವಾಸನೆ ಬಗ್ಗೆ	–	–		ಗಿರುವುದರಿಂದ ಹಾಗೂ ವಿವಿಧ ರೀತಿ ಸಾವಯವ ಕಳ್ಚಾವಸ್ತುಗಳನ್ನು ಸರಿಯಾದ ರೀತಿಯಲ್ಲಿ ಸಂಗ್ರಹಣೆ ಮಾಡದಿರುವುದರಿಂದ ಮತ್ತು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಕಾರ್ಯಾಚರಿಸದೇ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ವಾಸನೆ ಬರುವ ಸಾಧ್ಯತೆ ಇರುತ್ತದೆ ಆದುದರಿಂದ ಈ ನಿಟ್ಟಿನಲ್ಲಿ ವಾಸನೆ ಮೂಲವನ್ನು ಪತ್ತೆಹಚ್ಚಿ ಅದನ್ನು ತಡೆಗಟ್ಟಲು ಅಗತ್ಯ ಕ್ರಮವನ್ನು ತುರ್ತಾಗಿ ಕೈಗೊಳ್ಳುವಂತೆ ದಿನಾಂಕ 08–12–2006 ರಂದು ಉದ್ದಿಮೆಯವರಿಗೆ ಸೂಚನೆ ನೀಡಲಾಗಿದೆ ಉದ್ದಿಮೆಯವರು

					ಅಗತ್ಯ ಕ್ರಮ ಕೈಗೊಂಡಿರುತ್ತಾರೆ ಹಾಗೂ ಪರಿಹರಿಸಲಾಗಿದೆ
24	ಕೈಗಾರಿಕೆಯಿಂದ ಕೆಟ್ಟ ವಾಸನೆ ಬರುತ್ತಿರುವ ಬಗ್ಗೆ ದೂರು	–	–	09–01–07	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 17–01–2007 ಮತ್ತು 23–01–2007ರಂದು ಪರಿವೀಕ್ಷಣೆ ನಡೆಸಿ ಉದ್ದಿಮೆಗೆ ನೋಟೀಸ್ ಜಾರಿಗೊಳಿಸಿ ದೂರ್ವಾಸನೆಯನ್ನು ತಡೆಗಟ್ಟುವ ಬಗ್ಗೆ ಕ್ರಮ ಕೈಗೊಳ್ಳು ನಿರ್ದೇಶನ ನೀಡಲಾಗಿದೆ
25	–	–	ಪ್ಲೇಸೆಂಗ್ ಮತ್ತು ಟನಿಂಣ್ ಮಿಷನ್ ನಿಂದ ಶಬ್ದ ಮಾಲಿನ್ಯದ ಬಗ್ಗೆ	18–01–07	ಪರಿವೀಕ್ಷಣೆ ನಡೆಸಿ ಈ ಚಟುವಟಿಕೆಯು ಕೈಗಾರಿಕಾ ವಲಯದಲ್ಲಿದ್ದು ದೂರುದಾರರ ಮನೆ ಕೈಗಾರಿಕೆ ವಲಯದಲ್ಲೆ ಇರುವುದರಿಂದ ಕೈಗಾರಿಕೆ ಪ್ರದೇಶಕ್ಕೆ ನಿಬಂಧಿಸಿದ ಅನುಗುಣವಾಗಿ ಇರುವುದಾಗಿ

					ದೂರುದಾರರಿಗೆ ಪತ್ರ ಬರೆದು ಕಡತವನ್ನು ಮುಕ್ತಾಯ ಗೊಳಿಸಲಾಗಿದೆ
26	–	ಮೆ ಇಂಡನ್ ಫೀಲಾ ಉದ್ದಿಮೆಯಿಂದ ಹೊಬರುತ್ತಿರುವ ಕಲುಷಿತ ನೀರಿನ ಬಗ್ಗೆ	–	19–01–07	ಉದ್ದಿಮೆಯನ್ನು ಪರಿವೀಕ್ಷಣೆ ಮಾಡಲಾಯಿತ್ತು ಉದ್ದಿಮೆಯವರು ಕ್ರಮ ಕೈಗೊಂಡಿರುವುದರಿಂದ ಕಲುಷಿತ ನೀರು ಹೊರಹೊಗದಂತೆ ಸೂಚನೆ ನೀಡಿದ ನಂತರ ಕಲುಷಿತ ನೀರು ಹೊರಹೋಗುವುದನ್ನು ತಡೆಹಿಡಿಯಲಾಗಿದೆ
27	ಪ್ಲಾವುಡ್ ಉದ್ದಿಮೆಯಿಂದ ಹಾಗೂ ಸುತ್ತಲಿನ ಕೈಗಾರಿಕೆಗಳಿಂದ ತೊಂದರೆಯಾಗುತ್ತಿರುವ	–	–	13–01–07	ಪರಿವೀಕ್ಷಣೆ ನಡೆಸಿದ ಸಮಯದಲ್ಲಿ ದೂರುದಾರರಿಗೆ ಅಂತಹ ಯಾವುದೇ ತೊಂದರೆಯಾಗುತ್ತಿರುವುದು ಕಂಡು ಬಂದಿರುವುದಿಲ್ಲ

	ಬಗ್ಗೆ				ದೂರುದಾರರು ಮನೆಗಳು ಕೈಗಾರಿಕ ಪ್ರದೇಶದ ಬದಿಯಲ್ಲೇ ಇರುತ್ತದೆ
28	ಹೊಟಗಳ್ಳಿಯ ಸೋನೂ ಉದ್ದಿಮೆಯಿಂದ ವಾಯು ಮತ್ತು ಶಬ್ದ ಮಾಲಿನ್ಯದ ಬಗ್ಗೆ	–	–	19-02-07	ಸದರಿ ದೂರಿನನ್ವಯ ಪರಿವೀಕ್ಷಣೆ ನಡೆಸಿ ಉದ್ದಿಮೆದಾರರನ್ನು ಮೌಖಿಕ ವಿಚಾರಣೆಗೆ ಒಳಪಡಿಸಿ ಸೂಕ್ತ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿದ ನಂತರ ಕಾರ್ಯಚರಣೆ ನಡೆಸಲು ನಿರ್ದೇಶಿಸಲಾಯಿತ್ತು ಸದ್ಯದ ಪರಿಸ್ಥಿತಿಯಲ್ಲಿ ಉದ್ದಿಮೆಯು ಕಾರ್ಯಚರಣೆಯನ್ನು ಸ್ಥಗಿತ ಗೊಳಿಸಿದೆ
29	ಸಾಯಿ ಕಾರರ್ಟನ್ ಉದ್ದಿಮೆಯಿಂದ ವಾಯು ಮಾಲಿನ್ಯ	–	–	26-02-07	ಉದ್ದಿಮೆಗೆ ನೋಟಿಸ್ ಜಾರಿ ಮಾಡಿ ಉದ್ದಿಮೆಯು ಸೂಕ್ತ ಕ್ರಮ ಕೈಗೊಂಡಿರುತ್ತದೆ ಈ ದೂರನ್ನು

	ಉಂಟಾಗುತ್ತಿರುವ ಬಗ್ಗೆ				ಮುಕ್ತಾಯಗೊಳಿಸಲಾಗಿದೆ
30	–	–	ಕೆಸಿಮಾ ಪಾರ್ಕ್ ಜೂಸ್ ಸೆಂಟರ್‌ನಿಂದ ಶಬ್ದ ಮಾಲಿನ್ಯವಾ ಗುತ್ತಿರುವ ಬಗ್ಗೆ	26–02–07	ಈ ಬಗ್ಗೆ ಹೋಟೆಲ್‌ಗೆ ನೋಟೀಸ್ ಜಾರಿ ಮಾಡಲಾಗಿದೆ
31	ತಾರಸ್ ಮಿನರಲ್ಸ್‌ನಿಂದ ವಾಯು ಮಾಲಿನ್ಯ ಕುರಿತು	–	–	16–03–07	ಉದ್ದಿಮೆಯವರಿಗೆ ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲಾಗಿದೆ
32	ಬನ್ನೂರು ರಸ್ತೆಯಲ್ಲಿರುವ ಕೋಳಿ ಫೀಡ್ಸ್ ಕಾರ್ಖಾನೆಯಿಂದ ವಾಯು ಮಾಲಿನ್ಯ ಕುರಿತು	–	–	23–03–07	ಈ ಬಗ್ಗೆ ಉದ್ದಿಮೆಗೆ ನೋಟೀಸ್ ಜಾರಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಹಾಗೂ ಉದ್ದಿಮೆಯವರು ಕ್ರಮ ಕೈಗೊಂಡಿರುತ್ತಾರೆ

ಅನುಬಂಧ–2

ಪ್ರಾದೇಶಿಕ ಕಛೇರಿ, ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಉದ್ದಿಮೆಗಳಿಗೆ ನೀಡಿರುವ ಮುಚ್ಚುವ ಆದೇಶದ ವಿವರಗಳು

ಕ್ರಮ ಸಂಖ್ಯೆ	ಕಾರ್ಖಾನೆ /ಪ್ರಕರಣಗಳ ಹೆಸರು ಹಾಗೂ ವಿಳಾಸ	ಉಲ್ಲಂಘಿಸಿದ ನಿಯಮಗಳು			ಮಂಡಳಿಯುತೆಗೆದುಕೊಂಡಿರುವ ಕಾನೂನು ಕ್ರಮಗಳು
		ಜಲ ಕಾಯ್ದೆ	ವಾಯು ಕಾಯ್ದೆ	ಪರಿಸರ ಕಾಯ್ದೆ	
ವರ್ಷ 2004–05					
1	ಮೆ ಚಾಮುಂಡಿ ಡಿಸ್ಟಲರೀಸ್ ಪ್ರೈ, ಲಿ, ಮಲಿಯೂರು ಗ್ರಾಮ, ಬನ್ನೂರು ಹೋಬಳಿ, ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ	ಹೌದು	ಹೌದು	–	ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಕಾರಣ ಉದ್ದಿಮೆಗೆ ಜಲ ಹಾಗೂ ವಾಯು ಕಾಯ್ದೆಗಳಡಿಯಲ್ಲಿ ಮುಚ್ಚುವ ಆದೇಶಗಳನ್ನು ನೀಡಿರುತ್ತವೆ

ವರ್ಷ 2005–06					
1	ಮೆ ಕರ್ನಾಟಕ ಮೈನಿಂಗ್ ಶಾಂತಿಪುರ ಗ್ರಾಮ, ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಾಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
2	ಮೆ ಕರ್ನಾಟಕ ಮೈನಿಂಗ್, ಹುನಗನಹಳ್ಳಿ ಗ್ರಾಮ, ಹೆಚ್ ಡಿ ಕೋಟೆ, ಮೈಸೂರು			ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಮೆ ದುರ್ಗ ಮೈನಿಂಗ್, ಐತ್ನತೊರವಳ್ಳಿ, ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
4	ಮೆ ದುರ್ಗ ಮೈನಿಂಗ್, ತುರದಕಟ್ಟೆ ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ

					ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
ವರ್ಷ 2006–07					
1	ಹೆಚ್ ಎಸ್ ಮಲ್ಲಪ್ಪ ಮಿನರಲ್ಸ್ ಮುಂಡೂರು ಗ್ರಾಮ ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಗಣಿಗಾರಿಕೆಯನ್ನು ನಡೆಸುತ್ತಿರುವುದರಿಂದ ಜಲಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
2	ಹೆ ಎಚ್ ಶಿವಣ್ಣ, ಮಾಚಹಳ್ಳಿ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಗಣಿಗಾರಿಕೆಯನ್ನು ನಡೆಸುತ್ತಿರುವುದರಿಂದ ಜಲಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಮಾಡ್ರನ್ ಸ್ಟೋನ್ ಕ್ರಷರ್ಸ್ ಸರ್ವೆ ನಂ–69/1, ಹುಂಸೂರು ರಸ್ತೆ, ಬೆಳವಾಡಿ ಗ್ರಾಮ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ	–	ಹೌದು	–	ಈ ಸ್ಟೋನ್ ಕ್ರಷರ್ಸ್ ಘಟಕವು ವಸತಿ ಪ್ರದೇಶದಲ್ಲಿದುದ್ದರಿಂದ ಹಾಗೂ ಅಗತ್ಯ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡಿರದಿದ್ದ ಕಾರಣ ಘಟಕಕ್ಕೆ ವಾಯು ಕಾಯ್ದೆಯಡಿಯಲ್ಲಿ 2004–05ರ

					ಸಾಲಿನಲ್ಲಿ ಸಮ್ಮತಿ ಪತ್ರವನ್ನು ತಿರಸ್ಕರಿಸಲಾಗಿತ್ತು ಸದರಿ ಉದ್ದಿಮೆಯ ಮೇಲೆ ದಿನಾಂಕ 12–08–2006 ರಂದು ಮೈಸೂರಿನ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿತ್ತು ಮಾನ್ಯ ನ್ಯಾಯಾಲಯವು ರೂ 6000/– ದಂಡವನ್ನು ಉದ್ದಿಮೆಯನ್ನು ವಿಧಿಸಿ ಆದೇಶವನ್ನು ಹೊರಡಿಸಿದೆ ಹಾಗೂ ಉದ್ದಿಮೆಯನ್ನು ಸದರಿ ಸ್ಥಳದಿಂದ ತೆಗೆಯಲಾಗಿದೆ
4	ಮೈಸೂರು ಮಹಾನಗರ ಪಾಲಿಕೆ, ಕಸಾಯಿ ಖಾನೆ, ಕೆಸರೆ, ಮೈಸೂರು	ಹೌದು	–	–	ಮೈಸೂರು ಮಹಾನಗರ ಪಾಲಿಕೆಯವರು ಕಾಸಾಯಿ ಖಾನೆಯಿಂದ ಹೊರಬರುವ ಕಲ್ಮಸತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸದೇ ವಿಸರ್ಜನೆ ಮಾಡುತ್ತಿದುದರಿಂದ ಹಾಗೂ ಕಸಾಯಿಖಾನೆಯ ಘನತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುತ್ತಿಲ್ಲವಾದುದರಿಂದ ಜಲಕಾಯ್ದೆ, 1974

					ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರಿನಲ್ಲಿ ದಿನಾಂಕ 16–11–2006 ರಂದು ಹೂಡಲಾಗಿದೆ
5	ಮೈಸೂರು ಮಹಾನಗರ ಪಾಲಿಕೆ, ಮೈಸೂರು	ಹೌದು	–	–	ಮೈಸೂರು ಮಹಾನಗರ ಪಾಲಿಕೆಯವರು ಮೈಸೂರು ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಲುಷಿತ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸದೇ ವಿಸರ್ಜನೆ ಮಾಡುತ್ತಿದುದರಿಂದ ಹಾಗೂ ತ್ಯಾಜ್ಯ ನೀರನ್ನು ಕೆರೆಗಳಿಗೆ ಹರಿಯಬಿಟ್ಟು ಮಾಲಿನ್ಯವನ್ನುಂಟು ಮಾಡುತ್ತಿದುದರಿಂದ ಜಲಕಾಯ್ದೆ, 1974 ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರಿನಲ್ಲಿ ದಿನಾಂಕ 10–01–2007 ರಂದು ಹೂಡಲಾಗಿದೆ ಹಾಗೂ ಮೊಕದ್ದಮೆಯು ದಿನಾಂಕ 27–07–2007

					ರಂದು ವಿಚಾರಣೆಗೆ ಬರಲಿದೆ
6	ಮೆ // ಪರಶುರಾಮ ಟೆಲೆಫೇರ್ ಅಸೋಸಿಯೇಷನ್, ಬನ್ನೂರು ರಸ್ತೆ, ಭಂಗತಗಹಳ್ಳಿ, ವರುಣಾ ಹೋಬಳಿ, ಮತ್ತು ಜಿಲ್ಲೆ,	–	–	ಹೌದು	ಅಸೋಸಿಯೇಷನ್‌ನವರು ಜಲ ಮತ್ತು ವಾಯು ಕಾಯ್ದೆಯಡಿಯಲ್ಲಿ ಹಾಗೂ ಪರಿಸರ ವಿಮೋಚನಾ ಪತ್ರ ಪಡೆಯದೇ ವಸತಿ ಬಡಾವಣೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ್ದುದರಿಂದ ಸದರಿ ಕಾಯ್ದೆಗಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರು ಇಲ್ಲಿ ದಿನಾಂಕ 27–09–2006 ರಂದು ಹೂಡಲಾಗಿದೆ

ಅನುಬಂಧ–2

ಪ್ರಾದೇಶಿಕ ಕಛೇರಿ, ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಉದ್ದಿಮೆಗಳ/ಸ್ಥಳೀಯ ಸಂಸ್ಥೆಗಳ ವಿರುದ್ಧ ಹೂಡಿರುವ ಮೊಕದ್ದಮೆಗಳು

ಕ್ರಮ ಸಂಖ್ಯೆ	ಕಾರ್ಖಾನೆ /ಪ್ರಕರಣಗಳ ಹೆಸರು ಹಾಗೂ ವಿಳಾಸ	ಉಲ್ಲಂಘಿಸಿದ ನಿಯಮಗಳು			ಮಂಡಳಿಯು ತೆಗೆದುಕೊಂಡಿರುವ ಕಾನೂನು ಕ್ರಮಗಳು
		ಜಲ ಕಾಯ್ದೆ	ವಾಯು ಕಾಯ್ದೆ	ಪರಿಸರ ಕಾಯ್ದೆ	

ವರ್ಷ 2004–05					
	ಯಾವುದೂ ಇಲ್ಲ				
ವರ್ಷ 2005–06					
1	ಮೆ, ಸಾದನಹಳ್ಳಿ ಫೆಲಸ್ಯೆಟ್ ಮೈನ್ಸ್, ಸಾದನಹಳ್ಳಿ ಗ್ರಾಮ, ಕೆ ಆರ್, ಎಸ್, ರಸ್ತೆ, ಮೈಸೂರು ತಾಲ್ಲೂಕು ಮತ್ತಿ ಜಿಲ್ಲೆ	–	–	ಹೌದು	2005–06 ನೇ ಸಾಲಿಗೆ ಸಮ್ಮತಿಯನ್ನು ತಿರಸ್ಕರಿಸಿದೆ, ಇದಲ್ಲದೇ ಈ ಗಣಿಗಾರಿಕೆಯ ವಿರುದ್ಧ ಮೈಸೂರು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ 12–08–2006 ರಂದು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
ವರ್ಷ 2006–07					
1	ಎಸ್, ಎ, ಪ್ರೇಮಕುಮಾರ್, ಮಂಚಿಹಳ್ಳಿ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನಾ ಪತ್ರ ಪಡೆಯದೇ ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಹೆಚ್ ಡಿ ಕೋಟೆಯ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
2	ಏ ಶ್ರೀಧರ್ ಕಯನೈಟ್				ಪರಿಸರ ವಿಮೋಚನೆ ಪತ್ರ ಪಡೆಯದೇ

	ಮೈನ್ಸ್, ಚಾಮಲಪುರ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಕೆ, ಶ್ರೀನಿವಾಸ ರಾವ್ ಮ್ಯಾಗ್ನಸೈಟ್ ಮೈನ್ಸ್, ಕಾಮಗೊಂಡನಹಳ್ಳಿ, ಹುಂಸೂರು ತಾಲ್ಲೂಕು, ಮೈಸೂರು ಜಿಲ್ಲೆ	–	–	–	ಪರಿಸರ ವಿಮೋಚನೆ ಪತ್ರ ಪಡೆಯದೇ ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಉಪಾಧ್ಯಕ್ಷರೆ, ಮೈಸೂರು ನಗರ ಸಾಂಸ್ಕೃತಿಕ ನಗರ ನಿವೃತ್ತಿ ನಂತರ ಜನರು ಇಲ್ಲಿ ಶಾಂತಿಯಿಂದ ನೆಲೆಸಬೇಕು, ಅಲ್ಲಿಯ ಒಳ್ಳೆಯ ವಾತಾವರಣದಲ್ಲಿ ಬದುಕಬೇಕೆಂದು ಆಸೆ ಇಟ್ಟುಕೊಂಡು ಬಂದಿರತಕ್ಕಂಥ ಜನರ ಬವಣೆ ಬವಣೆಯಾಗಿಯೇ ಉಳಿದಿದೆ ಅಲ್ಲಿ ಪರಿಸರವಂತೂ ಇತ್ತೀಚೆಗೆ ತುಂಬಾ ಕೆಟ್ಟುಹೋಗಿದೆ ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ದ ಮಾಲಿನ್ಯ, ಇವೆಲ್ಲವೂ ಕೂಡ ಅವರ ಬದುಕಿನಲ್ಲಿ ಬವಣೆಯನ್ನುಂಟು ಮಾಡಿ ಅವರು ಈಗ ಸಾವು-ಬದುಕಿನ ಮಧ್ಯೆ ಒದ್ದಾಡುತ್ತಿದ್ದಾರೆ ಮನುಷ್ಯನಿಗೆ ಆರೋಗ್ಯ, ಒಳ್ಳೆಯ ಬುದ್ಧಿ ಮತ್ತು ಗಾಳಿ, ಈ ಮೂರು ಕೂಡ ಜೀವನದ ವರದಾನಗಳು ಈ ವರದಾನಗಳು ಇಲ್ಲದೆ ಹೋದರೆ ಮನುಷ್ಯ ಬದುಕುವುದಾದರೂ ಹೇಗೆ? ಮೈಸೂರಿನಲ್ಲಿ ಒಂದು ಕಾಲಕ್ಕೆ ಹೊರಗಡೆಯವರೆಲ್ಲಾ ನಿವೃತ್ತಿಯಾದವರು ಬಂದು ನೆಲೆಸುತ್ತಿದ್ದರು ಈಗ ಮೈಸೂರು ಕೂಡ ಬೆಂಗಳೂರಿನ ತರಹ ಆಗುತ್ತಿದೆ ಅಲ್ಲಿ ಈಗ ಎಲ್ಲೆಲ್ಲಿ ಮನೆಗಳಿವೆಯೋ ಅಂಥ ಕಡೆಗಳಲ್ಲೂ ಕೂಡ ಫ್ಲೋರ್ ಮಿಲ್‌ಗೆ ಲೈಸೆನ್ಸ್ ಕೊಡುತ್ತಿದ್ದಾರೆ ಯಾವುದೇ ರೀತಿಯಾದಂಥ ಹಿಡಿತ ಲೈಸೆನ್ಸ್ ಕೊಡುವ ವಿಚಾರದಲ್ಲಿ ಇಲ್ಲವಾಗಿದೆ ನಿಖರವಾಗಿ ಎಂಥ ಕಡೆಗಳಲ್ಲಿ ಲೈಸೆನ್ಸ್ ಕೊಡಬೇಕೆನ್ನುವ ಬಗ್ಗೆ ಯೋಚನೆ ಮಾಡುವುದೇ ಇಲ್ಲ ಆದುದರಿಂದ ಈ ಬಗ್ಗೆ ಅರಣ್ಯ ಸಚಿವರು ಸರಿಯಾಗಿ ಗಮನಿಸಿ ಅದನ್ನು ತಡೆಗಟ್ಟಬೇಕು ಮೈಸೂರು ಹಾಗೂ ಬೆಂಗಳೂರಿನ ಪಾರಂಪರಿಕತೆಯನ್ನು ಉಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಈ ಕಾರ್ಯವನ್ನು ಅವರು ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ನಮಗೆ ಸ್ಪಷ್ಟವಾಗಿ ಹೇಳಬೇಕು

ಶ್ರೀ ಸಿ ಚನ್ನಿಗಪ್ಪ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ ಅವರು ಹೇಳಿದ ಹಾಗೆ ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ 32 ಕೇಸ್‌ಗಳಲ್ಲಿ ದೂರು ದಾಖಲಾಗಿದ್ದು ಅದರಲ್ಲಿ 6 ಕೇಸ್‌ಗಳನ್ನು ಕೋರ್ಟ್‌ಗೆ ಹಾಕಿದ್ದೇವೆ 9 ಕೇಸ್‌ಗಳಲ್ಲಿ ಅವುಗಳನ್ನು ಕ್ಲೋಸ್ ಮಾಡುವುದಕ್ಕೆ ಇವೊತ್ತು ಕ್ಲೋಸ್ ಆರ್ಡರ್ ಕೊಟ್ಟಿದ್ದೇವೆ ವಾಯು ಮಾಲಿನ್ಯ ಆಗಬಾರದು, ಜಲ ಮಾಲಿನ್ಯ ಆಗಬಾರದು, ಶಬ್ದ ಮಾಲಿನ್ಯ ಆಗಬಾರದೆಂದು ಈಗಾಗಲೇ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ ವೈಜ್ಞಾನಿಕವಾಗಿ ಇವೊತ್ತು ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿನ ಕಸಾಯಿಖಾನೆ ಮತ್ತು ಮಹಾನಗರಪಾಲಿಕೆಗೆ ನಾವು ನೋಟೀಸ್ ಕೊಟ್ಟಿದ್ದೇವೆ ಅಲ್ಲಿನ ಕಸಾಯಿಖಾನೆಯಿಂದ ಬರತಕ್ಕಂಥ ವಾಸನೆ ಮತ್ತು ಅಲ್ಲಿ ಏನು ಗಲೀಜು ಇತ್ತು ಅದನ್ನು ತೆಗೆಯಬೇಕೆಂದು ನೋಟಿಸ್ ಕೊಟ್ಟಿದ್ದೇವೆ ಅದೇ ರೀತಿ ಮಹಾನಗರ ಪಾಲಿಕೆ ಚರಂಡಿಗಳನ್ನು ಮುಚ್ಚಿಲ್ಲವೆಂದು ಹೇಳಿದ್ದರು ಅದರ ಬಗ್ಗೆ ಕೂಡ ನಾವು ಮಹಾನಗರಪಾಲಿಕೆಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ ಈಗ

ಅವರು ಕೂಡ ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆ ಮಾನ್ಯ ಸದಸ್ಯರು ಏನು ಉತ್ತಮವಾದ ಪ್ರಶ್ನೆಯನ್ನು ನಾಗರಿಕರ ಸಲುವಾಗಿ ಕೇಳಿ ಸಲಹೆಯನ್ನು ಕೊಟ್ಟಿದ್ದಾರೋ ಆ ಪ್ರಕಾರ ಸರ್ಕಾರ ಈಗಾಗಲೇ ಕೆಲಸಗಳನ್ನು ಮಾಡಿಸುತ್ತಿದೆಯೆಂದು ಹೇಳಬಯಸುತ್ತೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿ ಗಿಡ ಮರಗಳನ್ನು ನೆಡುವಾಗ ಒಳ್ಳೆಯ ಸಸಿಗಳನ್ನು ನೆಡಬೇಕಾಗಿದೆ ಇವು ಹೇಗಿರಬೇಕೆಂದರೆ ಈ ಸಸಿಗಳ ಬೇರು ಆಳದವರೆಗೂ ಹೋಗುವಂತಿರಬೇಕು ಮತ್ತು ಮುಂದೆ ಮರವಾದಾಗ ಅದರ ರೆಂಬೆಗಳು ಬಿದ್ದು ಹೋಗದೇ ಇರುವಂತೆ ಇರಬೇಕು ಮತ್ತು ಈ ಮರಗಳು ಹೆಚ್ಚು ವರ್ಷಗಳು ಇರುವಂತಿರಬೇಕು ಅಂಥ ಗಿಡಗಳನ್ನು ನೆಡಬೇಕೆಂದು ನನ್ನ ಸಲಹೆ

ಶ್ರೀ ಸಿ ಚನ್ನಿಗಪ್ಪ ಮಾನ್ಯ ಉಪಾಧ್ಯಕ್ಷರೆ,– ಮಾನ್ಯ ಸದಸ್ಯರ ಸಲಹೆಯಂತೆ ಬಹುವಾರ್ಷಿಕ ಮರಗಳನ್ನು ಈಗಾಗಲೇ ನಾಟಿ ಮಾಡಿದ್ದೇವೆ ಮೊನ್ನೆ ಮೈಸೂರಿನಲ್ಲಿ ಸುಮಾರು 30 ಎಕರೆ ಜಮೀನಿಗೆ ಸ್ಯಾನಿಟೀರಿಯಂ ಹಾಸ್ಟೆಟಲ್ನಲ್ಲಿ ಕಂಪ್ಲೀಟ್ ಕಾಂಪೌಂಡ್ ಹಾಕಿಸಿ ಅಲ್ಲಿ ಮಾನ್ಯ ದೇವೇಗೌಡರು, ಮಾನ್ಯ ಮಂತ್ರಿಗಳು ಮತ್ತು ಅಲ್ಲಿನ ನಾಗರಿಕರು ಮತ್ತು ಪೌರ ಕಾರ್ಮಿಕರು ಸೇರಿ ಅನೇಕ ರೀತಿಯ ಸಸಿಗಳನ್ನು ನೆಟ್ಟಿದ್ದೇವೆ ಅವೆಲ್ಲವೂ ಬಹುವಾರ್ಷಿಕ ಮರಗಳಾಗಿರುವ ಕಾರಣ ಅವುಗಳು 100 ರಿಂದ 500 ವರ್ಷಗಳವರೆಗೆ ಇರತಕ್ಕಂಥವುಗಳೇ ಆಗಿವೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಆ ಕೆಲಸವನ್ನು ನಾವು ಮಾಡುತ್ತೇವೆ

ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವುದು

164 (1301) ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವ ಉದ್ದೇಶ ಸರ್ಕಾರದ ಆಲೋಚನೆಯಲ್ಲಿದೆಯೇ,

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ ಮಾನ್ಯ ಜವಳಿ ಸಚಿವರು

ಅ) ಹೌದು ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದೆ ಇದೆ

ಆ) ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ಪವರ್ ಲೂಮ್ಸ್ ಪಾರ್ಕ್ನ್ನು ಸ್ಥಾಪಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ

"ಶ್ರೀ ಗುಳೇದಗುಡ್ಡ ಪವರ್ಲೂಂ ಮಿನಿ ಪಾರ್ಕ್" ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿದೆ ಈ ಉದ್ದೇಶಿತ ಸಂಸ್ಥೆಯ